"ಮಧುರ ಮಕ್ಕಳೇ - ಒಬ್ಬ ತಂದೆಯ ಮಹಿಮೆ ಅಪರಮಪಾರವಾಗಿದೆ, ತಂದೆಯಂತಹ ಮಹಿಮೆ ಬೇರೆ ಯಾರಿಗೂ ಇರಲು ಸಾಧ್ಯವಿಲ್ಲ"

ಪ್ರಶ್ನೆ: ನೀವು ಮಕ್ಕಳಿಗೆ ಈ ವಿದ್ಯೆಯ ಮೇಲೆ ಬಹಳ ಗಮನವಿರಬೇಕು, ಏಕೆ?

ಉತ್ತರ: ಏಕೆಂದರೆ ಇಡೀ ಕಲ್ಪದಲ್ಲಿ ತಂದೆಯು ಒಮ್ಮೆ ಮಾತ್ರ ಪರಮಧಾಮದಿಂದ ಓದಿಸುವ ಸಲುವಾಗಿ ಬರುವರು. ಮನುಷ್ಯರು ಓದುವ ಸುಲುವಾಗಿ ಭಾರತದಿಂದ ವಿದೇಶಕ್ಕೆ ಹೋಗುವರು, ಇದು ದೊಡ್ಡ ಮಾತೇನಿಲ್ಲ ಇಲ್ಲಿಯಂತೂ ಓದಿಸುವವರು ಬಹಳ ದೂರದಿಂದ ಬರುವರು ಅಂದಾಗ ಮಕ್ಕಳಿಗೆ ಬಹಳ-ಬಹಳ ಗಮನವಿರಬೇಕಾಗಿದೆ. ಸ್ವಲ್ಪ ಕಷ್ಟವಾದರೂ ಸಹ ಪರವಾಗಿಲ್ಲ. ನಿಮ್ಮ ಶಾಲೆಗಳನ್ನು ಗಲ್ಲಿ-ಗಲ್ಲಿಯಲ್ಲಿಯೂ ತೆರೆಯಬೇಕಾಗಿದೆ ಇಲ್ಲವೆಂದರೆ ಇಷ್ಟೆಲ್ಲಾ ಜನರು ಹೇಗೆ ಓದುವರು. ಬಾಬಾರವರ ಪರಿಚಯ ಎಲ್ಲರಿಗೂ ಅವಶ್ಯವಾಗಿ ಸಿಗಬೇಕಾಗಿದೆ.

ಓಂ ಶಾಂತಿ. ಮಧುರಾತಿ ಮಧುರ ಮಕ್ಕಳೇ ಎಂದು ಹೇಳುವವರು ಯಾರು? ಇವರು ಸಾಧು ಸನ್ಯಾಸಿ ಮನುಷ್ಯರಂತೂ ಅಲ್ಲ, ಇಲ್ಲಿ ವಿಭಿನ್ನವಾಗಿದೆ. ಇದಂತೂ ಬೇರೆ ಮಾತಾಯಿತು. ಸಾಧು ಸನ್ಯಾಸಿ ಮನುಷ್ಯರನ್ನಂತು ಕೂಡಲೇ ಕಂಡು ಹಿಡಿಯಬಹುದು. ಅವರಿಗೆ ಮಹಾತ್ಮ ಎಂದೂ ಕರೆಯುತ್ತಾರೆ, ಇದನ್ನು ನೀವು ಮಕ್ಕಳಷ್ಟೇ ತಿಳಿದುಕೊಂಡಿದ್ದೀರಿ. ಮಗು ಎಂದು ಆತ್ಮಕ್ಕೆ ಹೇಳಲಾಗುತ್ತದೆ. ಆತ್ಮವೇ ಎಲ್ಲವನ್ನು ತಿಳಿದುಕೊಂಡಿದೆ, ಶರೀರವಲ್ಲ. ಆತ್ಮವೇ ಹೇಳುತ್ತದೆ ಇದು ವ್ಯರ್ಥವೆಂದು. ಇಂದ್ರಿಯಗಳ ಮುಖಾಂತರ ತಿಳಿದುಕೊಳ್ಳುತ್ತದೆ. ಆತ್ಮ ಇಲ್ಲದಿದ್ದರೆ ಈ ಕಣ್ಣುಗಳೂ ಸಹ ಕೆಲಸ ಮಾಡಲು ಸಾಧ್ಯವಿಲ್ಲ. ಪ್ರತಿಯೊಂದನ್ನೂ ಆತ್ಮವೇ ತಿಳಿದುಕೊಂಡಿದೆ.

ಈಗ ನೀವು ಮಕ್ಕಳನ್ನು ಆತ್ಮಾಭಿಮಾನಿಯಾಗಿ ಮಾಡಲಾಗುತ್ತದೆ. ಆತ್ಮ ಹೇಳುತ್ತದೆ ನಾನು ಈ ಕರ್ಮೇಂದ್ರಿಯಗಳ ಮುಖಾಂತರ ಕರ್ತವ್ಯ ಮಾಡುತ್ತೇನೆ. ವಾಸ್ತವದಲ್ಲಿ ಆತ್ಮಕ್ಕೆ ಪುರುಷ ಎಂದು ಹೇಳಲಾಗುತ್ತದೆ, ಸ್ತ್ರೀ ಎಂದಲ್ಲ. ಮೇಲ್ (ಪುರುಷ) ಆಗಿದೆ ಏಕೆಂದರೆ ನಾವೆಲ್ಲ ಸಹೋದರರಾಗಿದ್ದೇವೆ. ಈಗ ನೀವು ಹೊಸ ಹೊಸ ಮಾತುಗಳನ್ನು ಕೇಳುತ್ತೀರಿ. ಯಾರು ಬಂದಿದ್ದಾರೆ? ಅವರಿಗೆ ಯಾವುದೇ ಮನುಷ್ಯ ರೂಪವಿಲ್ಲ ಎಂದು ನೀವು ತಿಳಿದುಕೊಂಡಿದ್ದೀರಿ. ಅವರು ಬೇಹದ್ದಿನ ತಂದೆಯಾಗಿದ್ದಾರೆ. ಯಾರು ಬ್ರಹ್ಮನ ಮುಖಾಂತರ ತಿಳಿಸಿಕೊಡುತ್ತಾರೆ? ಸಾಧು ಸಂತರು ಹೇಳುತ್ತಾರೆಂದು ಹೇಳಲಾಗುವುದಿಲ್ಲ, ಆದರೆ ಮನುಷ್ಯರ ಗಮನ ನಾಮ ರೂಪದ ಕಡೆ ಹೋಗುತ್ತದೆ ಎಂದರ್ಥವಲ್ಲ. ನಿಮ್ಮ ಬುದ್ಧಿ ಅರ್ಥ ಮಾಡಿಕೊಳ್ಳುತ್ತದೆ - ನಮ್ಮ ತಂದೆ ಬೇಹದ್ದಿನ ತಂದೆಯಾಗಿದ್ದಾರೆ. ಅವರು ಈ ಶರೀರದಿಂದ ನಮಗೆ ಆಸ್ತಿ ಕೊಡುತ್ತಾ ಇದ್ದಾರೆ. ರಾಜಯೋಗವನ್ನು ಕಲಿಸುತ್ತಾರೆ. ಇವರು ಎಲ್ಲರಿಗೂ ತಂದೆಯಾಗಿದ್ದು, ಪ್ರಕೃತಿ ಸಹಿತ ಸರ್ವ ಮನುಷ್ಯಾತ್ಮರ ಪತಿತ ಪಾವನ ಆಗಿದ್ದಾರೆ. ಮನುಷ್ಯ ಮಾತ್ರರಿಗಲ್ಲ 5 ತತ್ವಗಳಿಗೂ ಸಹ ತಂದೆ ಆಗಿದ್ದಾರೆ. ಸರ್ವರ ಸದ್ಗತಿ ಮಾಡುವವರು ಶ್ರೇಷ್ಠಾತಿ ಶ್ರೇಷ್ಠ ತಂದೆಯಾಗಿದ್ದಾರೆ. ಸೃಷ್ಠಿಯಲ್ಲಿ ಮಹಿಮಾ ಯೋಗ್ಯರೆಂದರೆ ಒಬ್ಬ ತಂದೆ ಮಾತ್ರ ಆಗಿದ್ದಾರೆ. ಅನ್ಯರ್ಯಾರೂ ಇಲ್ಲ. ಬ್ರಹ್ಮಾ, ವಿಷ್ಣು, ಶಂಕರನು ಮಹಿಮಾ ಯೋಗ್ಯರಾಗಲು ಸಾಧ್ಯವಿಲ್ಲ. ಅವರ ಜಯಂತಿ ಮಾಡಿ ಏನು ಮಾಡುತ್ತಾರೆ, ಲಕ್ಷ್ಮೀ- ನಾರಾಯಣರ ಕಂಬೈಂಡ್ ಸ್ವರೂಪವಾಗಿದೆ ವಿಷ್ಣು. ಅವರು ಈಗ ಎಲ್ಲಿ ಇದ್ದಾರೆ? ಲಕ್ಷ್ಮೀ-ನಾರಾಯಣ ಪುನರ್ಜನ್ಮ ಪಡೆದು ಈಗ ಅಂತಿಮ ಜನ್ಮದಲ್ಲಿದ್ದಾರೆ. ಈಗ ಮತ್ತೆ ಶಿವ ತಂದೆಯು ಯೋಗ್ಯರನ್ನಾಗಿ ಮಾಡುತ್ತಿದ್ದಾರೆ. ಸರ್ವರ ಸದ್ಗತಿದಾತ ಅವರೊಬ್ಬರೇ ಆಗಿದ್ದಾರೆ. ಮಹಿಮೆಯೂ ಸಹ ಒಬ್ಬರದೇ ಆಗಿದೆ. ಪತಿತ ಪಾವನ ತಂದೆ ವಿನಃ ಪ್ರಪಂಚದ ಗತಿಯು ಏನಾಗಿದೆ ನೋಡಿ. ಕೃಷ್ಣನ ಭಕ್ತರಿಗೆ ರಾಧೆ-ಕೃಷ್ಣರೆಲ್ಲಿದ್ದಾರೆಂದು ಕೇಳಿದರೆ, ಅವರು ಸರ್ವವ್ಯಾಪಿ ಎಂದು ಹೇಳುತ್ತಾರೆ. ರಾಧೆಯ ಪೂಜಾರಿ ಹೇಳುತ್ತಾರೆ ಎಲ್ಲಿ ನೋಡಿದರೂ ರಾಧೆಯೇ ರಾಧೆ ಇದ್ದಾರೆ. ಹನುಮಂತನ ಪೂಜಾರಿ ಹೇಳುತ್ತಾರೆ ಎಲ್ಲಿ ನೋಡಿದರಲ್ಲಿ ಹನುಮಂತ ಇದ್ದಾರೆ. ಆದರೆ ಆ ರೀತಿ ಇರಲು ಸಾಧ್ಯವಿಲ್ಲ, ತಂದೆಯು ತನ್ನ ಮಹಿಮೆಯನ್ನು ಮಾಡಿಕೊಳ್ಳುವುದಿಲ್ಲ. ಅವರ ಪಾತ್ರದಿಂದ ಸಿದ್ಧವಾಗುತ್ತದೆ, ಅನ್ಯ ಯಾರಿಗೂ ಇಂತಹ ಮಹಿಮೆ ಮಾಡಲು ಸಾಧ್ಯವಿಲ್ಲ. ಲಕ್ಷ್ಮಿ-ನಾರಾಯಣರು ರಾಜ್ಯ ಮಾಡುತ್ತಾರೆ, ಬಾಲ್ಯದಲ್ಲಿ ಅವರೇ ರಾಧೆ ಕೃಷ್ಣ ಆಗಿದ್ದಾರೆ. ಅದು ಅವರ ಪ್ರಾಲಬ್ಧವಾಗಿದೆ. ಆದರೆ ಅವರ ಮಹಿಮೆ ಏನು ಮಾಡುತ್ತಾರೆ. ಬ್ರಹ್ಮಾ, ವಿಷ್ಣುವಿನ ಮಹಿಮೆ ಹೆಚ್ಚಾಗಿ ಮಾಡುವುದಿಲ್ಲ. ಮಹಿಮೆಯಂತೂ ಒಬ್ಬರದ್ದೇ ಆಗಿದೆ. ಅವರನ್ನೇ ಪತಿತ ಪಾವನ ಎಂದು ಹೇಳುತ್ತಾರೆ. ಈಗ ನೀವು ಮಕ್ಕಳು ವಿಷ್ಣು ಯಾರೆಂದು ತಿಳಿದುಕೊಂಡಿದ್ದೀರಿ. ವಿಷ್ಣುವಿಗೆ ಸ್ವದರ್ಶನ ಚಕ್ರದಾರಿ ಹಾಗೂ ಸೂಕ್ಷ್ಮವತನ ವಾಸಿಯಾಗಿ ಏಕೆ ತೋರಿಸುತ್ತಾರೆ? ಮನುಷ್ಯರಿಗಂತೂ ಜಾಸ್ತಿ ಭುಜ ಇರುವುದಿಲ್ಲ. ಸೂಕ್ಷ್ಮವತನದಲ್ಲಿಯೂ ನಾಲ್ಕು ಭುಜ , ಪ್ರವೃತ್ತಿ ಮಾರ್ಗವೆಂದು ಸಿದ್ಧ ಮಾಡಲು ತೋರಿಸುತ್ತಾರೆ.

ತಂದೆ ಹೇಳುತ್ತಾರೆ - ಮಧುರ ಮಕ್ಕಳೇ, ಈಗ ನಿಮಗೆ ತಿಳಿದಿದೆ ನಾವು 84 ಜನ್ಮಗಳನ್ನು ಹೇಗೆ ತೆಗೆದುಕೊಳ್ಳುತ್ತೇವೆ. ನೀವು ಗೃಹಸ್ಥ ವ್ಯವಹಾರವು ಪವಿತ್ರತೆ ಇತ್ತು. ಮಂದಿರದಲ್ಲಿ ಹೋಗಿ ಹಾಡುತ್ತೀರಲ್ಲವೆ ಸರ್ವಗುಣ ಸಂಪನ್ನ....... ನೀವೇ ಮಾತಪಿತ..... ಈಗ ಈ ಮಹಿಮೆ ರಾಂಗ್ (ತಪ್ಪು) ಆಗಿ ಬಿಟ್ಟಿದೆ. ಈ ಮಹಿಮೆಯು ಕೇವಲ ಒಬ್ಬ ತಂದೆಯದಾಗಿದೆ. ದೇವತೆಗಳಿಗೆ ಇಲ್ಲ. ಏನೆಲ್ಲಾ ಮಹಿಮೆ ಇದೆ ಒಬ್ಬ ತಂದೆಯದು ಆಗಿದೆ. ಅವರು ಪರಮಪಿತ ಪರಮಾತ್ಮ, ಪರಮ ತಂದೆ, ಪರಮ ಗುರು, ಪರಮ ಸದ್ಗುರು ಅಕಾಲನಾಗಿದ್ದಾರೆ. ಅವರನ್ನು ನೆನಪು ಮಾಡುತ್ತೇವೆ. ಅವರೇ ಅಕಾಲಮೂರ್ತಿ ಆಗಿದ್ದಾರೆ. ಶಿವ ತಂದೆಯನ್ನು ನಂದಿಯ ಮೇಲೆ ತೋರಿಸುತ್ತಾರೆ. ಅವರನ್ನೇ ಅಕಾಲ ಸಿಂಹಾಸನವೆಂದು ತೋರಿಸುತ್ತಾರೆ. ಈಗ ಇದು ಯಾರಿಗೂ ತಿಳಿದಿಲ್ಲ, ಶಿವ ತಂದೆಯು ಯಾರಾಗಿದ್ದಾರೆ! ಮಂದಿರದಲ್ಲಿ ಏನು ಇಡುತ್ತಾರೆ, ಅದು ಅವರ ಚಿಹ್ನೆಯಾಗಿದೆ. ಅವರು ಜ್ಞಾನ ಸಾಗರ ಪತಿತ ಪಾವನ ಆಗಿದ್ದಾರೆ. ಅವರಿಗಂತೂ ಮನುಷ್ಯರ ಶರೀರ ಬೇಕಾಗಿದೆ. ನೀವು ಮಕ್ಕಳು ತಿಳಿದುಕೊಂಡಿದ್ದೀರಿ, ಅವರ ರಥ ಬ್ರಹ್ಮಾರವರೇ ಆಗಿದ್ದಾರೆ. ಧರ್ಮ ಸ್ಥಾಪಕರಿಗೆ ಏನು ಮಹಿಮೆ ಇದೆ, ಅವರು ಕೇವಲ ಬಂದು ಧರ್ಮ ಸ್ಥಾಪನೆ ಮಾಡುತ್ತಾರೆ, ಅವರು ಯಾರಿಗೂ ಮುಕ್ತಿ ಜೀವನ್ಮುಕ್ತಿ ಕೊಡುವುದಿಲ್ಲ. ಮನುಷ್ಯರು ಮೋಕ್ಷ ಬೇಕೆಂದು ಹೇಳುತ್ತಾರೆ. ಆದರೆ ಮೋಕ್ಷ ಸಿಗುವುದಿಲ್ಲ. ಆ ಧರ್ಮ ಸ್ಥಾಪಕರಂತು ತಮ್ಮ ಧರ್ಮದವರನ್ನು ಕೆಳಗೆ ತರಲು ನಿಮಿತ್ತರಾಗುತ್ತಾರೆ. ಅವರಂತೂ ಬಂದು ಧರ್ಮ ಸ್ಥಾಪನೆ ಮಾಡುತ್ತಾರೆ. ನಾಟಕದಲ್ಲಿ ಅವರದೂ ಪಾತ್ರವಿದೆ. ಯಾರೆಲ್ಲಾ ಬರುತ್ತಾರೆಯೋ ಅವರು ಪುನರ್ಜನ್ಮ ತೆಗೆದುಕೊಳ್ಳಲೇಬೇಕು. ತಂದೆ ಸ್ಥಾಪನೆ ಮಾಡುತ್ತಾರೆ, ಅವರಂತೂ ಎಲ್ಲರ ಪತಿತ ಪಾವನ ಆಗಿದ್ದಾರೆ. ಮತ್ಯಾರೂ ಸಹ ಪಾವನ ಮಾಡಲು ಸಾಧ್ಯವಿಲ್ಲ. ಅವರಂತೂ ಬರುತ್ತಾರೆ ತಮ್ಮ-ತಮ್ಮ ಪಾತ್ರ ಮಾಡುತ್ತಾರೆ. ಸತೋ, ರಜೋ, ತಮೋನಲ್ಲಿ ಬರಲೇಬೇಕು. ಧರ್ಮ ಸ್ಥಾಪನೆ ಮಾಡಲೇ ಬೇಕು ಅಷ್ಟೇ. ಅವರು ಏನೆಲ್ಲ ಶಿಕ್ಷಣ ಕೊಟ್ಟರು ಅದೆಲ್ಲಾ ಶಾಸ್ತ್ರವಾಯಿತು. ಯಾರು ಧರ್ಮ ಸ್ಥಾಪನೆ ಮಾಡುತ್ತಾರೆ ಅವರೇ ಖಂಡಿತವಾಗಿ ಪಾಲನೆ ಮಾಡಬೇಕು. ಹಿಂತಿರುಗಿ ಯಾರೂ ಹೋಗುವದಿಲ್ಲ. ಎಲ್ಲರೂ ಈ ಸಮಯದಲ್ಲಿ ಭಿನ್ನ-ಭಿನ್ನ ನಾಮ ರೂಪದಲ್ಲಿ ಈ ಪತಿತ ಪ್ರಪಂಚದಲ್ಲಿ ಇರುತ್ತಾರೆ. ಮೊದಲ ನಂಬರಿನಲ್ಲಿರುವ ಲಕ್ಷ್ಮೀ-ನಾರಾಯಣರನ್ನು ನೋಡಿ, ಅವರೂ ಸಹ ಈಗ ಇಲ್ಲಿ ಇದ್ದಾರೆ. ಪ್ರಜಾಪಿತ ಬ್ರಹ್ಮನ ಮೂಲಕ ಬ್ರಾಹ್ಮಣರು ರಚನೆಯಾಗುತ್ತಾರೆ. ನಂತರ ಸ್ವರ್ಗದಲ್ಲಿ ರಾಧೆ ಕೃಷ್ಣ ಆಗುತ್ತಾರೆ. ಎಲ್ಲಿಯವರೆಗೆ ಶಿವಬಾಬಾ ಬರುವುದಿಲ್ಲ, ಅಲ್ಲಿಯವರೆಗೆ ಯಾರೂ ಪಾವನರಾಗಲು ಸಾಧ್ಯವಿಲ್ಲ. ಒಬ್ಬ ತಂದೆಯವರದ್ದೇ ತ್ಯಾಗ ಹಾಗೂ ಮಹಿಮೆಯಾಗಿದೆ. ಶಿವಾಯ ನಮಃ, ನೀವೇ ತಂದೆ-ತಾಯಿ..... ಎಂದು ಎಲ್ಲರೂ ನೆನಪು ಮಾಡುತ್ತಾರೆ. ಎಲ್ಲರಿಗಿಂತ ಜಾಸ್ತಿ ಮಹಿಮೆ ಈ ತಂದೆಯದೇ ಆಗಿದೆ. ಹೇ! ಗಾಡ್ಫಾದರ್ ಎಂದು ತಂದೆಯನ್ನೇ ಕರೆಯುತ್ತಾರೆ. ಈ ನಾಟಕ ಈ ರೀತಿ ಮಾಡಲ್ಪಟ್ಟಿದೆ. ಯಾವಾಗ ಈ ಸೃಷ್ಟಿ ಹಳೆಯದಾಗುತ್ತದೆಯೋ, ಆಗ ತಂದೆ ಬರುತ್ತಾರೆ. ಮೂಲವತನ, ಸೂಕ್ಷ್ಮವತನ, ಸ್ಥೂಲ ವತನ ಮೂರು ಲೋಕಗಳ ಜ್ಞಾನ ಕೊಡುತ್ತಾರೆ. ಜ್ಞಾನ ಒಂದು ಬಾರಿಯೇ ಸಿಗುವುದು. ಅವರಿಗೆ ಜ್ಞಾನ ಸಾಗರ ಎಂದು ಹೇಳುತ್ತಾರೆ. ಬಾಕಿ ಈ ಸೂರ್ಯ, ಚಂದ್ರ ಮುಂತಾದವಂತೂ ಬೇಹದ್ದಿನ ರಂಗ ಮಂಟಪಕ್ಕೆ ಬೆಳಕನ್ನು ಕೊಡುವಂತ ದೀಪಗಳಾಗಿವೆ. ರಾತ್ರಿ-ಹಗಲು ಈ ರಂಗಮಂಟಪಕ್ಕೆ ಸೂರ್ಯ-ಚಂದ್ರರು ಬೆಳಕು ಕೊಡುವವರಾಗಿದ್ದಾರೆ. ಈ ರೀತಿ ಸೂರ್ಯ ದೇವತಾಯ ನಮಃ ಎಂದು ಹೇಳುವುದಿಲ್ಲ. ಬ್ರಹ್ಮ, ವಿಷ್ಣು, ಶಂಕರರು ದೇವತೆಗಳಾಗಿದ್ದಾರೆ, ಮೂಲ ವತನದಿಂದ ಕೆಲವು ಆತ್ಮಗಳು ಬರುತ್ತಾರೆ. ಬಂದವರು ಸೀದಾ ಗರ್ಭದಲ್ಲಿ ಹೋಗುತ್ತಾರೆ. ಸೂಕ್ಷ್ಮವತನದಲ್ಲಿ ಹೋಗುವುದಿಲ್ಲ, ಸೀದಾ ಸತ್ಯಯುಗದಲ್ಲಿ ಹೋಗಿ ಜನ್ಮ ಪಡೆಯುತ್ತಾರೆ. ಆದರೆ ಅಲ್ಲಿ ಯಾವುದೇ ಪಾಪ ಕರ್ಮ ಆಗುವುದಿಲ್ಲ. ಇಲ್ಲಿ ಪಾಪ ಮಾಡುತ್ತಾರೆ, ಆದ ಕಾರಣ ಈ ಜೀವನ ಸಾಕು-ಸಾಕು ಎಂದು ಹೇಳುತ್ತಾರೆ. ಧರ್ಮರಾಜ ನಮ್ಮನ್ನು ಈಗ ರಕ್ಷಿಸು ನಂತರ ನಾವು ಪಾಪ ಮಾಡುವುದಿಲ್ಲ. ಜನ್ಮ ಪಡೆದ ನಂತರ ಮತ್ತೆ ಪಾಪ ಮಾಡಲು ಶುರು ಮಾಡುತ್ತಾರೆ, ಅಲ್ಲಿಯದು ಅಲ್ಲಿಗೇ ಉಳಿದುಕೊಂಡಿತು. ಇದೂ ಸಹ ನಾಟಕದಲ್ಲಿ ಇದೆ. ಭಾರತದ ದೊಡ್ಡ ಶತ್ರು ರಾವಣನೇ ಆಗಿದ್ದಾನೆ. ದ್ವಾಪರದಲ್ಲಿ ರಾವ ಣರಾಜ್ಯ ಶುರುವಾಗುತ್ತದೆ. ದ್ವಾಪರದಲ್ಲಿಯೇ ದೇವೀ-ದೇವತೆಗಳು ವಾಮ ಮಾರ್ಗದಲ್ಲಿ ಬರುತ್ತಾರೆ. ನಂತರ ಅವರದೇ ಮಂದಿರಗಳು ಇರುತ್ತವೆ. ಜಗನ್ನಾಥ ಪುರಿಯಲ್ಲಿ ನೋಡಿ ಹೇಗೆ ಮಂದಿರ ಮಾಡಲ್ಪಟ್ಟಿದೆ! ಒಳಗೆ ಕೃಷ್ಣನ ಮೂರ್ತಿ ಕಪ್ಪಾಗಿದೆ ಹಾಗೂ ಹೊರಗೆ ದೇವತೆಗಳ ಅಶ್ಲೀಲ ಚಿತ್ರಗಳಿವೆ. ಇಂತಹ ಚಿತ್ರಗಳು ಮಂದಿರದಲ್ಲಿ ಇರಬಾರದಾಗಿದೆ. ನೀವು ಈಗ ಶ್ರೀಮತದ ಮೇಲೆ ನಡೆದು ಶ್ರೇಷ್ಠರಾಗುವಂತಹ ಪುರುಷಾರ್ಥ ಮಾಡುತ್ತಿದ್ದೀರಿ. ಸತ್ಯಯುಗದ ಆದಿಯಲ್ಲಿ ಲಕ್ಷ್ಮೀ-ನಾರಾಯಣರು ಶ್ರೇಷ್ಠರಲ್ಲವೆ. ಅವರು ಈ ಶ್ರೇಷ್ಠ ಪದವಿಯನ್ನು ಹೇಗೆ ಪಡೆದುಕೊಂಡರು? ಈಗ ನೀವು ಮತ್ತೆ ಓದುತ್ತಿದ್ದೀರಿ, ತಂದೆ ಹೇಳುತ್ತಾರೆ ನಾನು ಕಲ್ಪ-ಕಲ್ಪ, ಕಲ್ಪದ ಸಂಗಮಯುಗದಲ್ಲಿ ಮತ್ತೆ ಬರುತ್ತೇನೆ, ಬರುತ್ತಲೇ ಇರುತ್ತೇನೆ, ಮಕ್ಕಳಿಗೆ ರಾಜಯೋಗ ಕಲಿಸಿಕೊಡುತ್ತೇನೆ. ನಂತರ ಸತೋ, ರಜೋ, ತಮೋದಲ್ಲಿ ಬರಲೇಬೇಕು. ನೀವಂತೂ ಎಂಬತ್ತ ನಾಲ್ಕು ಜನ್ಮದಲ್ಲಿ ಬರಲೇಬೇಕು, ಯಾರು ಸತ್ಯಯುಗದ ಆರಂಭದಲ್ಲಿ ಬರುತ್ತಾರೆ ಅವರು ತೆಗೆದುಕೊಳ್ಳುತ್ತಾರೆ. 84 ಲಕ್ಷ ಜನ್ಮವಂತೂ ಇಲ್ಲ. ಮನುಷ್ಯರಿಗೆ ಯಾರೆಲ್ಲಾ ಏನೆಲ್ಲಾ ಹೇಳುತ್ತಾರೆ, ಅದೆಲ್ಲವನ್ನು ಸತ್ಯ-ಸತ್ಯ ಎಂದು ತಿಳಿದುಕೊಳ್ಳುತ್ತಾರೆ. ಒಂದುವೇಳೆ 84 ಲಕ್ಷ ಜನ್ಮ ಇರುವುದಾದರೆ ಕಲ್ಪದ ಆಯುಸ್ಸು ಬಹಳ ದೊಡ್ಡದಾಗುತ್ತಿತ್ತು. ತಂದೆಯು ಹೇಳುತ್ತಾರೆ ದೇವೀ-ದೇವತೆಗಳಿಗೆ 84 ಜನ್ಮ, ನಂತರ ಇಸ್ಲಾಮಿ, ಬುದ್ಧ, ಕ್ರಿಶ್ಚಿಯನ್ ಅನ್ಯರು ಎಷ್ಟು ಜನರು ಜನ್ಮ ತೆಗೆದುಕೊಳ್ಳುತ್ತಾರೆ. ಲೆಕ್ಕವಿದೆಯಲ್ಲವೇ. ಬರುವವರಂತು ಬಹಳ ಇದ್ದಾರೆ, ಆದರೆ ಅವರೆಲ್ಲರೂ ರೆಂಬೆ, ಕೊಂಬೆಗಳಾಗಿದ್ದಾರೆ. ನೀವು ಇಡೀ ಸೃಷ್ಟಿಯ ಆದಿ, ಮಧ್ಯ, ಅಂತ್ಯವನ್ನು ತಿಳಿದುಕೊಂಡಿದ್ದೀರಿ. ಭಾರತವೇ ಮೊದಲ ನಂಬರಿನ ವಿಶ್ವದ ಮಾಲೀಕನಾಗಿತ್ತು. ಅನ್ಯ ಯಾವುದೇ ಧರ್ಮವಿರಲ್ಲಿಲ್ಲ. ಈಗ ಆ ದೇವೀ-ದೇವತಾ ಧರ್ಮದ ತಳಹದಿ ಇಲ್ಲದಂತಾಗಿದೆ. ಅವರ ಶಾಸ್ತ್ರವೂ ಇಲ್ಲ. ಈ ಗೀತಾ ಶಾಸ್ತ್ರ ಮತ್ತೆ ಆಗುತ್ತದೆ, ಈ ರೀತಿ ಇಲ್ಲಿ ನೀವು ಯಾವ ಸತ್ಯ ಗೀತೆ ಮಾಡುತ್ತೀರಿ ಅದೇ ಇರುತ್ತದೆ. ಮತ್ತೆ ಅದೇ ಗೀತೆ

ಪುನರಾವರ್ತನೆಯಾಗುತ್ತದೆ. ಭಕ್ತಿಮಾರ್ಗಕ್ಕೆ ಇವೆಲ್ಲಾ ಮತ್ತೆ ಬೇಕಾಗುತ್ತದೆಯಲ್ಲವೇ. ಬ್ರಹ್ಮನ ಮುಖಾಂತರ ತಿಳಿಸಿಕೊಡುತ್ತಾರೆ. ಮಕ್ಕಳಿಗೆ ಖಂಡಿತವಾಗಿ ಬ್ರಹ್ಮನ ಮುಖಾಂತರ ಭಗವಂತನ ಪ್ರಾಪ್ತಿಯಾಗುತ್ತದೆ. ಬಾಬಾ ಹೇಳುತ್ತಾರೆ ಇದೆಲ್ಲಾ ಭಕ್ತಿಮಾರ್ಗವಾಗುತ್ತದೆ, ಯಾವಾಗ ನಾನು ಭಾರತದಲ್ಲಿ ಬರುತ್ತೇನೆ ಆಗ ನನ್ನ ಪ್ರಾಪ್ತಿ ಆಗುತ್ತದೆ. ಭಾರತವೇ ಅವಿನಾಶಿ ಖಂಡವಾಗಿದೆ, ಭಾರತವೇ ಎಷ್ಟು ಸಾಹುಕಾರವಾಗಿತ್ತು ಸೋಮನಾಥನ ಮಂದಿರ ಎಷ್ಟು ದೊಡ್ಡದಾಗಿತ್ತು, ಎಲ್ಲವನ್ನೂ ಲೂಟಿ ಮಾಡಿಕೊಂಡು ಹೋದರು. ಬಿರ್ಲಾನ ಹತ್ತಿರ ಬಹಳ ಹಣವಿದೆ, ಆದ್ದರಿಂದ ದೊಡ್ಡ ಮಂದಿರ ಮಾಡಿ ಬಿಟ್ಟಿದ್ದಾರೆ. ತಂದೆಯು ಎಷ್ಟು ಚೆನ್ನಾಗಿ ತಿಳಿಸಿಕೊಡುತ್ತಾರೆ, ಇದನ್ನು ಮತ್ಯಾರೂ ತಿಳಿದುಕೊಳ್ಳಲು ಸಾಧ್ಯವಿಲ್ಲ. ಜ್ಞಾನ ಸಾಗರ ತಂದೆ ಯಾವಾಗ ಬಂದು ತಿಳಿಸಿಕೊಡುತ್ತಾರೆ ಆಗ ಮಕ್ಕಳು ಅರ್ಥ ಮಾಡಿಕೊಳ್ಳುತ್ತಾರೆ. ಇಲ್ಲಿಯಾರು ಓದಿಸುತ್ತಾರೆ, ಯಾವುದೇ ಸನ್ಯಾಸಿ ಓದಿಸುವುದಿಲ್ಲ. ಅವರ ಹೆಸರಾಗಿದೆ ಶಿವ. ಎಲ್ಲಾ ಆತ್ಮಗಳು ಅವರ ಮಕ್ಕಳು. ಮಕ್ಕಳಂತೂ ಶರೀರದ ಹೆಸರನ್ನು ಬದಲಾಯಿಸುತ್ತಾ ಇರುತ್ತಾರೆ. ತಂದೆಯ ಹೆಸರು ಶಿವ ಎಂದಾಗಿದೆ. ನನಗೆ ಬೇರೆ ಯಾವುದೇ ಹೆಸರಿಲ್ಲ. ನಾವಂತೂ ಜನನ-ಮರಣದಲ್ಲಿ ಬರುತ್ತೇವೆ, ದೇಹಾಭಿಮಾನಿಗಳೂ ಸಹ ಆಗುತ್ತೇವೆ. ತಂದೆಯು ಎಂದೂ ದೇಹಾಭಿಮಾನದಲ್ಲಿ ಬರುವುದಿಲ್ಲ. ತಂದೆ ಎಂದೆಂದಿಗೂ ದೇಹೀ ಅಭಿಮಾನಿ ಆಗಿರುತ್ತಾರೆ, ಏಕೆಂದರೆ ಅವರು ಜನನ-ಮರಣದಲ್ಲಿ ಬರುವುದಿಲ್ಲ, ಶಿವರಾತ್ರಿ ಆಚರಣೆ ಮಾಡುತ್ತೀರಲ್ಲವೇ, ಆದರೆ ರಾತ್ರಿಯ ಅರ್ಥವನ್ನು ಯಾರೂ ತಿಳಿದುಕೊಂಡಿಲ್ಲ. ಎಷ್ಟು ಮುಗ್ಧರಾಗಿದ್ದೀರಿ, ಈಗ ರಾತ್ರಿಯಾಗಿದೆ, ನಂತರ ಹಗಲು ಬರುತ್ತದೆ. ಈಗ ಕಲ್ಪದ ಅಂತ್ಯ ಅಂದರೆ ರಾತ್ರಿಯಾಯಿತಲ್ಲವೇ! ಸತ್ಯಯುಗ, ತ್ರೇತಾಯುಗವಾಗಿದೆ ಹಗಲು. ದ್ವಾಪರ ಕಲಿಯುಗವಾಗಿದೆ ರಾತ್ರಿ. ತಂದೆ ಬರುವುದೇ ಸಂಗಮದಲ್ಲಿ. ಇದಾಗಿದೆ ಬೇಹದ್ದಿನ ರಾತ್ರಿ ಹಾಗೂ ಹಗಲು. ಭಗವಾನುವಾಚ, ಈ ಸಂಗಮದ ವೇಳೆ ಮುಖ್ಯವೆಂದು, ಪುನಃ ಈ ಸಮಯ ಯಾವಾಗ ಬರುತ್ತದೆ, ಕಂಡು ಹಿಡಿಯುತ್ತೀರಾ! ಹಾಗಾದರೆ ಇದು ಬೇಹದ್ದಿನ ದಿನ ಹಾಗೂ ರಾತ್ರಿಯಾಗಿದೆ, ಇದಕ್ಕೆ ಕಲ್ಪದ ಸಂಗಮ ಎಂದು ಹೇಳುತ್ತಾರೆ. ಜನ್ಮದಿನವೂ ಸಹ ಒಬ್ಬರದೇ ಮಾಡುತ್ತಾರೆ. ಶಿವ ಬಾಬಾ ಬರುತ್ತಾರೆ ಮತ್ತೆ ಹೊರಟು ಹೋಗುತ್ತಾರೆ. ಅವರು ಜನನ-ಮರಣದಲ್ಲಿ ಬರುವುದಿಲ್ಲ. ಇದು ಆಟವಾಗಿದೆ. ದಾರಿಯಲ್ಲಿ ಹೋಗುವಾಗ ಬ್ರಾಹ್ಮಣರು ಸಿಕ್ಕಿ ಹಾಕಿಕೊಂಡರು... ಎಂದು ಹೇಳುತ್ತಾರೆ. ಇದು ತಂದೆಗೆ (ಬ್ರಹ್ಮಾ) ಗೊತ್ತಿತ್ತೆ. ಬಾಬಾ ಆಶ್ಚರ್ಯವಾಗಿ ಪ್ರವೇಶವಾದರು. ಮೊದಲು ಸ್ವಲ್ಪವಷ್ಟೆ ತಿಳಿಸಿ ಕೊಡುತ್ತಾರೆ, ನಂತರ ನಿಧಾನವಾಗಿ ತಿಳಿಸಿಕೊಡುತ್ತಾರೆ. ಇದು ತಂದೆಯ ಕೆಲಸವಾಗಿದೆ. ಈ ಜ್ಞಾನ ಯಜ್ಞದಿಂದ ವಿನಾಶದ ಜ್ವಾಲೆ ಪ್ರಜ್ವಲಿತವಾಗಬೇಕು. ಈ ಬೇಹದ್ದಿನ ಯಜ್ಞದಲ್ಲಿ ಹದ್ದಿನ ಸಾಮಗ್ರಿಗಳು ಸ್ವಾಹ ಆಗಬೇಕು. ಇದು ಬೇಹದ್ದಿನ ತಂದೆಯ ಯಜ್ಞವಾಗಿದೆ. ಈ ಯಜ್ಞವನ್ನು ಯಾರೂ ರಚನೆ ಮಾಡಲು ಸಾಧ್ಯವಿಲ್ಲ. ಭಕ್ತಿ ಮಾರ್ಗವು ಸಮಾಪ್ತಿಯಾಗಿ ಬಿಡುತ್ತದೆ, ಈ ಜ್ಞಾನವನ್ನು ಬುದ್ಧಿಯಲ್ಲಿ ಇಟ್ಟು ಕೊಳ್ಳಬೇಕು. ಇಲ್ಲಿ ಓದುವುದಕ್ಕಾಗಿ ಬರುತ್ತೇವೆ, ಸ್ವಲ್ಪ ಕಷ್ಟವಾಗುತ್ತದೆ, ಮನುಷ್ಯರು ಓದುವ ಸಲುವಾಗಿ ಭಾರತದಿಂದ ಲಂಡನ್, ಅಮೇರಿಕಾಕ್ಕೆ ಹೋಗುತ್ತಾರೆ. ಇಲ್ಲಿ ಹೀಗೆ ಇಲ್ಲ, ತಂದೆ ಕಲ್ಪ ಕಲ್ಪದಲ್ಲು ಪರಂಧಾಮದಿಂದ ಓದಿಸುವ ಸಲುವಾಗಿ ಸಂಗಮಯುಗದಲ್ಲಿ ಬರುತ್ತಾರೆ. ಆದರೆ ಮಕ್ಕಳಿಗೆ ಇದರ ಬಗ್ಗೆ ಹೆಮ್ಮೆ ಇರಬೇಕು. ಮುಂದೆ ನಮ್ಮ ಈ ಶಾಲೆ ಗಲ್ಲಿ-ಗಲ್ಲಿಯಲ್ಲೂ ಆಗುತ್ತದೆ ಇಲ್ಲವೆಂದರೆ ಓದುವುದು ಹೇಗೆ? ಬಾಬಾರವರ ಪರಿಚಯ ಎಲ್ಲರಿಗೂ ಕೊಡಬೇಕು. ಬಾಬರವರನ್ನು ಖಂಡಿತವಾಗಿ ತಿಳಿದುಕೊಳ್ಳಬೇಕು. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಶ್ರೀಮತದಂತೆ ಶ್ರೇಷ್ಠರಾಗುವ ಪುರುಷಾರ್ಥ ಮಾಡಬೇಕು. ಓದುವ ಸಲುವಾಗಿ ಕಾರಣಗಳನ್ನು ಹೇಳಬಾರದು. ಖಂಡಿತವಾಗಿ ಓದಲೇಬೇಕು.

2. ಹೇಗೆ ಸತ್ಯಯುಗದಲ್ಲಿ ಪವಿತ್ರ ಗೃಹಸ್ಥ ಆಶ್ರಮವಿತ್ತು. ಹಾಗೆಯೇ ನಾವು ಪವಿತ್ರರಾಗಬೇಕು. ಒಬ್ಬ ತಂದೆ ತ್ಯಾಗಿ ಆಗಿದ್ದಾರೆ, ಅವರದೇ ಗುಣ ಗಾನ ಮಾಡಬೇಕು.

ವರದಾನ: ಪ್ರತಿಯೊಂದು ಖಜಾನೆಯನ್ನು ಸ್ವಯಂ ಪ್ರತಿ ಹಾಗೂ ಸರ್ವರ ಪ್ರತಿ ಕಾರ್ಯದಲ್ಲಿ ಉಪಯೋಗಿಸುವಂತಹ ಅನುಭವಿ ಮೂರ್ತಿ ಭವ.

ಸಮಾವೇಶ ಮಾಡಿಕೊಳ್ಳುವ ಶಕ್ತಿಯನ್ನು ಧಾರಣೆ ಮಾಡಿಕೊಂಡು ಸರ್ವ ಖಜಾನೆಗಳಿಂದ ಸಂಪನ್ನರಾಗಿರಿ, ಅದನ್ನು ಸ್ವಯಂನ ಕಾರ್ಯದಲ್ಲಿ ಅಥವಾ ಅನ್ಯರ ಸೇವೆಯಲ್ಲಿ ಉಪಯೋಗಿಸಿರಿ. ಖಜಾನೆಗಳನ್ನು ಉಪಯೋಗ ಮಾಡುವುದರಿಂದ ಅನುಭವಿ ಮೂರ್ತಿ ಆಗಿ ಬಿಡುತ್ತೀರಿ. ಆಲಿಸುವುದು, ಸಮಾವೇಶ ಮಾಡಿಕೊಳ್ಳುವುದು ಹಾಗೂ ಸಮಯದಲ್ಲಿ ಉಪಯೋಗದಲ್ಲಿ ತರುವುದು - ಇದೇ ವಿಧಿಯಿಂದ ಅನುಭವದ ಅಧಿಕಾರಿಯಾಗಬಹುದು. ಹೇಗೆ ಆಲಿಸುವುದು ಪ್ರಿಯವಾಗುತ್ತದೆ, ಪಾಯಿಂಟ್ ಬಹಳ ಶಕ್ತಿಶಾಲಿಯಾಗಿದೆಯೋ ಹಾಗೆಯೇ ಅದನ್ನು ಉಪಯೋಗ ಮಾಡಿ ಶಕ್ತಿಶಾಲಿ ವಿಜಯಿಗಳಾಗುತ್ತೀರೆಂದರೆ ಅನುಭವಿ ಮೂರ್ತಿ ಎಂದು ಹೇಳಲಾಗುವುದು.

ಸ್ಲೋಗನ್: ಯಾರು ಗ್ಲಾನಿ ಮಾಡುವವರಿಗೂ ಗುಣ ಮಾಲೆಯನ್ನು ಹಾಕುತ್ತಾ ಸಾಗುವರೋ ಅವರನ್ನೇ ಗುಣವಂತನೆಂದು ಹೇಳಲಾಗುತ್ತದೆ.